**OS.No.**14/2018 **PW**-1

**ದಿನಾಂಕಃ 19.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದಃ**

ನನ್ನ ಗಂಡ ಕೆ ವಿ ಮಂಜುನಾಥ್ ಪ್ರಾಂಶುಪಾಲರಾಗಿ ಹಾಗೂ 1ನೇ ಪ್ರತಿವಾದಿ ಕಾರ್ಯದರ್ಶಿಯಾಗಿ ಅನುಸೂಚಿ ಸ್ವತ್ತಿನಲ್ಲಿ ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯನ್ನು ನಡೆಸುತ್ತಿದ್ದರು ಎಂದರೆ ಸರಿ. ಈಗ ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಯಾಗಿ ಹೆಚ್.ವಿ. ನಾಗರತ್ನಮ್ಮರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಕೆ.ವಿ.ಶಂಭುಲಿಂಗಪ್ಪರವರು ತೀರಿಕೊಂಡ ನಂತರ ಸಂಸ್ಥೆಯ ಕಾರ್ಯದರ್ಶಿಗಳು ಯಾರಾಗಿರುತ್ತಾರೆ ಎಂದರೆ ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ಕೆ ವಿ ಮಂಜುನಾಥ್ ರವರು ತೀರಿಕೊಂಡ ನಂತರ ದಾವಾ ಸ್ವತ್ತುಗಳನ್ನು ಅಭಿವೃದ್ದಿಪಡಿಸುವ ಸಂದರ್ಭದಲ್ಲಿ ನಾನೂ ಸಹಾ ನಿರ್ದೇಶಕಿಯಾಗಿ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಹೌದು. ನನ್ನ ತಂದೆ ಮೃತ ರೇಣುಕಾರಾಧ್ಯರವರು ಸಹಾ ಈ ಸಂಸ್ಥೆಯಲ್ಲಿ ಸುಮಾರು 15 ವರ್ಷಗಳ ಕಾಲ ನಿರ್ದೇಶಕರು ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ನಿರ್ದೇಶಕಿಯಾದ ಸಮಯದಲ್ಲಿ ಹಾಗೂ ನನ್ನ ತಂದೆ ಮೃತ ರೇಣುಕಾರಾಧ್ಯರವರು ನಿರ್ದೆಶಕ ಮತ್ತು ಉಪಾಧ್ಯಕ್ಷರಾಗಿದ್ದ ಸಮಯದಲ್ಲಿ ಸಂಸ್ಥೆಯ ಆಸ್ತಿಗಳನ್ನು ಅಭಿವೃದ್ದಿಪಡಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತನ್ನು ಹೊರತುಪಡಿಸಿ ಶಾಲಾ ಆವರಣದ ಮತ್ತು ಆಟದ ಮೈದಾನಕ್ಕೆ ಸಂಬಂಧಪಟ್ಟಂತೆ ನನ್ನ ತಂದೆ ಜಿಪಿಎ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತ

ರೇಣುಕಾರಾಧ್ಯರವರು ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಯವರಿಗೆ ಬರೆದುಕೊಟ್ಟ ಜಿಪಿಎ ನಲ್ಲಿ ಸ.ನಂ.43/1 ಮತ್ತು 43/2 ರಲ್ಲಿಯ ಸ್ವತ್ತುಗಳನ್ನು ತನ್ನ ಪರವಾಗಿ ಸೂಕ್ತ ಕಂಡವರಿಗೆ ಸೂಕ್ತ ಬೆಲೆಗಳಿಗೆ ಕ್ರಯ ಮಾಡಲು, ಕ್ರಯದ ಮೊಬಲಗನ್ನು ಪಡೆಯಲು, ಒಪ್ಪಂದ ಕಾರಾರು ಪತ್ರ ಬರೆದುಕೊಡಲು, ಕ್ರಮವಾದ ಕ್ರಯಪತ್ರ ನೊಂದಾಯಿಸಿ ಕೊಡಲು ಅಧಿಕಾರವನ್ನು ಕೊಟ್ಟಿದ್ದೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಂಸ್ಥೆಯ ಕಾರ್ಯದರ್ಶಿಯವರಿಗೆ ಮಾತ್ರ ಅಧಿಕಾರ ಪತ್ರ ಕೊಟ್ಟಿರಲಿಲ್ಲ, ಕೆ.ವಿ.ಮಂಜುನಾಥ್ ಮತ್ತು ಶಂಭುಲಿಂಗಪ್ಪ ಇಬ್ಬರಿಗೂ ಸಹಾ ಜಂಟಿಯಾಗಿ ಮತ್ತು ವೈಯಕ್ತಿಕವಾಗಿ ಆ ಪತ್ರ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯನ್ನು ಪ್ರತಿನಿಧಿಸುವ ಪ್ರಾಂಶುಪಾಲರು ಮತ್ತು ಕಾಶಯದರ್ಶಿಯವರಿಗೆ ಜಿಪಿಎ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಭಾರತ್ ಯೂನಿವರ್ಸಲ್ ಶಿಕ್ಷಕರ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ, ಆಟದ ಮೈದಾನ ಅಥವಾ ಕಾಲೇಜಿನ ಹಿತದೃಷ್ಟಿಯಿಂದ ಅಭಿವೃದ್ದಿ ಕಾರ್ಯ ನಡೆಸಲು ಹಾಗೂ ಶೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಸರ್ಕಾರಿ ಕಚೇರಿ, ನ್ಯಾಯಾಲಯಗಳಿಂದ ಆರ್ಡರ್ ವಗೈರೆ ಪಡೆಯುವುದಕ್ಕೂ ಸಹಾ ಕಾಶಯದರ್ಶಿಯವರಿಗೆ ಅಧಿಕಾರ ಕೊಟ್ಟಿದ್ದರು ಎಂದರೆ ಸಾಕ್ಷಿ ಅವರು ಒಬ್ಬರಿಗೆ ಇಲ್ಲ, ಕೆ.ವಿ.ಮಂಜುನಾಥ್ ಮತ್ತು ಶಂಭಲಿಂಗಪ್ಪರವರಿಗೆ ಜಂಟಿ ಮತ್ತು ವೈಯಕ್ತಿಕವಾಗಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಶೆಡೂಲ್ ಆಸ್ತಿಗೆ ಸಂಬಂಧಪಟ್ಟಂನತೆ ಗ್ರಾಮ ಪಂಚಾಯಿತಿ, ಸರ್ವೆ ಇಲಾಖೆ, ನೀರು ಸರಬರಾಜು ಮಂಡಳಿ, ವಿದ್ಯುತ್ ಮಂಡಳಿ, ತಾಲ್ಲೂಕು ಕಚೇರಿ, ಪಿ.ಡಿ.ಓ. ಇತ್ಯಾದಿ ಕಚೇರಿಗಳಿಗೆ ನನ್ನ ಪರವಾಗಿ ವ್ಯವಹರಿಸಲು ಅಧಿಕಾರ

ಕೊಟ್ಟಿದ್ದರು ಎಂದರೆ ಸಾಕ್ಷಿ ಅವರು ಒಬ್ಬರಿಗೆ ಕೊಟಿಲ್ಲ, ಕೆ.ವಿ. ಮಂಜುನಾಥ್ ಮತ್ತು ಶಂಭುಲಿಂಗಪ್ಪರವರಿಗೆ ಜಂಟಿ ಮತ್ತು ವೈಯಕ್ತಿಕವಾಗಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸಾಮಾನ್ಯ ಅಧಿಕಾರ ಪತ್ರವನ್ನು ನನ್ನ ತಂದೆ ನೊಂದಣಿ ಮಾಡಿಸಿದ್ದರು ಎಂದರೆ ಸರಿ.

ಶ್ರೀ. ಕೆ.ಕೆ.ಆರ್. ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.